# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿ12(1ಬಿ)ಪಿ.ಆರ್/48/23-24

ಮುಖ್ಯ ಆಯುಕ್ತರವರ ಕಛೇರಿ
ಬೃಹತ್ ಮಹಾನಗರ ಪಾಲಿಕೆ ಕಛೇರಿಗಳು,
ಬೆಂಗಳೂರು, ದಿನಾಂಕ: 2/8/24

**ತಿದ್ದುಪಡಿ ಆದೇಶ**

ವಿಷಯ: ಅಧಿಕಾರ ಪ್ರತ್ಯಾಯೋಜನೆ ಕುರಿತು

ಉಲ್ಲೇಖ: ಸಂಖ್ಯೆ: ಬಿ12(1ಬಿ)ಪಿ.ಆರ್/48/23-24, ದಿನಾಂಕ: 15-11-2023

---------

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಡಳಿತ ಶಾಖೆಯ ಆಡಳಿತಾತ್ಮಕ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತದಂತೆ ಎಲ್ಲಾ ವಲಯ ಆಯುಕ್ತರು ಮತ್ತು ಅಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜನೆ ಮಾಡಿ ಆದೇಶ ಹೊರಡಿಸಲಾಗಿದ್ದು, ಸದರಿ ಆದೇಶದಲ್ಲಿನ ಸಂಖ್ಯೆ: 24ರಲ್ಲಿ ಗ್ರೂಫ್-'ಎ' ವೃಂದದ ಅಧಿಕಾರಿಗಳಿಗೆ ಆಸ್ತಿ ಮತ್ತು ಋಣಭಾರ ಪಟ್ಟಿಯನ್ನು ನಿರ್ವಹಣೆ ಮಾಡುವ ಅಧಿಕಾರವನ್ನು ಮುಖ್ಯ ಆಯುಕ್ತರು ರವರಿಗೆ ನೀಡಿ ಆದೇಶ ಹೊರಡಿಸಲಾಗಿರುತ್ತದೆ.

ಆದರೆ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ಪ್ರಕಾರ ಗ್ರೂಫ್-'ಎ' ವೃಂದದ ನೇಮಕಾತಿ ಪ್ರಾಧಿಕಾರ, ಶಿಸ್ತು ಪ್ರಾಧಿಕಾರ ಮತ್ತು ಅಪೀಲು ಪ್ರಾಧಿಕಾರವು ಸರ್ಕಾರದ ನಗರಾಭಿವೃದ್ಧಿ ಇಲಾಖೆಯಾಗಿರುವುದರಿಂದ ಹಾಗೂ ಗ್ರೂಫ್-'ಎ' ವೃಂದದ ಅಧಿಕಾರಿಗಳ ಆಡಳಿತಾತ್ಮಕ ವಿಷಯಗಳನ್ನು ಸರ್ಕಾರವು ನಿರ್ವಹಣೆ ಮಾಡುತ್ತಿರುವ ಹಿನ್ನಲೆಯಲ್ಲಿ, ಉಲ್ಲೇಖಿತದ ಆದೇಶವನ್ನು ಭಾಗಶಃ ಮಾರ್ಪಡಿಸಿ, ಎಲ್ಲಾ ಗ್ರೂಫ್-'ಎ' ವೃಂದದ ಅಧಿಕಾರಿಗಳು ಆಸ್ತಿ ಮತ್ತು ಋಣಭಾರ ಪಟ್ಟಿಯನ್ನು ಸರ್ಕಾರದ ನಗರಾಭಿವೃದ್ಧಿ ಇಲಾಖೆಗೆ ಸಲ್ಲಿಸಲು ಆದೇಶಿಸಿದೆ.

ಉಲ್ಲೇಖಿತದ ಆದೇಶದಲ್ಲಿ ಮತ್ತ್ಯಾವುದೇ ಬದಲಾವಣೆಗಳಿರುವುದಿಲ್ಲ.

ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು:**

: ಮಾನ್ಯ ಆಡಳಿತಗಾರರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ವಿಶೇಷ ಆಯುಕ್ತರು (ಆಡಳಿತ) ರವರಿಗೆ ಕಳುಹಿಸಿದೆ.
: ಎಲ್ಲಾ ವಲಯ ಆಯುಕ್ತರು ರವರಿಗೆ ಕಳುಹಿಸಿದೆ.
: ಎಲ್ಲಾ ವಲಯ ಜಂಟಿ ಆಯುಕ್ತರುಗಳಿಗೆ ಕಳುಹಿಸಿದೆ.
: ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ಗ್ರೂಫ್ 'ಎ' ವೃಂದದ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
: ಉಪ ಮುಖ್ಯ ಮಾಹಿತಿ ಅಧಿಕಾರಿ ರವರಿಗೆ ಕಳುಹಿಸುತ್ತಾ, ಸದರಿ ಆದೇಶವನ್ನು ಪಾಲಿಕೆಯ ವೆಬ್‌ಸೈಟ್ ನಲ್ಲಿ ಪ್ರಚುರಪಡಿಸಲು ಅಗತ್ಯ ಕ್ರಮ ಕೈಗೊಳ್ಳಲು ಕಳುಹಿಸಿದೆ.
: ಕಛೇರಿ ಪ್ರತಿ.

ಉಪ ಮುಖ್ಯ ಮಾಹಿತಿ ಅಧಿಕಾರಿ
(ಮಾಹಿತಿ ತಂತ್ರಜ್ಞಾನ) ರವರ ಕಛೇರಿ
ಸಂಖ್ಯೆ: 756
ದಿನಾಂಕ: 21/08/2024
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಎನ್.ಆರ್.ಚೌಕ, ಬೆಂಗಳೂರು